# ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

ಸುತ್ತೋಲೆ ಸಂಖ್ಯೆ : 150 ದಿನಾಂಕ : 24.10.2007

**ವಿಷಯ : ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ ಸೌಲಭ್ಯ ಹೊಂದಿರುವ ಬ್ಯಾಂಕ್ ಅಕೌಂಟ್‌ಗಳನ್ನು, ರೀಟೇಲರ್‌ಗಳು ತೆಗೆಯುವ ಬಗ್ಗೆ.**

ಉಲ್ಲೇಖ : ಆಜ್ಞಾಪತ್ರ ಸಂಖ್ಯೆ. ಎಫ್ಎ 1 – 012 ದಿನಾಂಕ : 17.09.2007

****

ಅಬಕಾರಿ ಕಾಯ್ದೆಯನ್ವಯ, ಡಿಸ್ಟ್ರಿಬ್ಯೂಟರ್ ಲೈಸೆನ್ಸೀಯಾದ ಕೆ.ಎಸ್.ಬಿ.ಸಿ.ಎಲ್, ಮದ್ಯವನ್ನು ಲೈಸೆನ್ಸೀಗಳಿಗೆ ಮಾತ್ರ ಮಾರಾಟ ಮಾಡಬಹುದಾಗಿದೆ. ಅಂದರೆ ಕೆ.ಎಸ್.ಬಿ.ಸಿ.ಎಲ್‌ನ ವಿವಿಧ ಡಿಪೋಗಳಿಂದ ಮದ್ಯವನ್ನು ಪಡೆಯುವ ರೀಟೇಲರಗಳು, ಅಧಿಕೃತ ಲೈಸೆನ್ಸೀಗಳಾಗಿರತಕ್ಕದ್ದು ಎಂಬುದು ಸ್ಪಷ್ಟ.

ಮೇಲ್ಕಂಡ ವಿಷಯದ ಬಗ್ಗೆ ಈಗಾಗಲೇ ಉಲ್ಲೇಖದಲ್ಲಿ ಕಾಣಿಸಿದ ಆಜ್ಞಾಪತ್ರವನ್ನು ಹೊರಡಿಸಲಾಗಿದ್ದು ಅದಕ್ಕೆ ತಮ್ಮ ಗಮನ ಸೆಳೆಯಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ರೀಟೇಲರ್ ಲೈಸೆನ್ಸೀ ತನ್ನ ಹೆಸರಿಲ್ಲಿ ನಿಗಮವು ನಿಗದಿಪಡಿಸಿದ 6 ಬ್ಯಾಂಕುಗಳಲ್ಲಿ ಯಾವುದಾದರೊಂದು ಬ್ಯಾಂಕಿನಲ್ಲಿ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ **ಸೌಲಭ್ಯ ಹೊಂದಿರುವ** ಬ್ಯಾಂಕ್ ಅಕೌಂಟನ್ನು 25.11.2007 ರೊಳಗಾಗಿ ಹೊಂದಿರತಕ್ಕದೆಂದು ಈ ಮೂಲಕ ಆದೇಶಿಸಲಾಗಿದೆ. ಸದರಿ ಬ್ಯಾಂಕ್ ಅಕೌಂಟನ್ನು ಎಸ್.ಬಿ.ಐ, ಎಸ್.ಬಿ.ಎಂ, ಸಿಂಡಿಕೇಟ್ ಬ್ಯಾಂಕ್, ಐಎನ್‌ಜಿ ವೈಶ್ಯ ಬ್ಯಾಂಕ್, ಆ್ಯಕ್ಸಿಸ್ ಬ್ಯಾಂಕ್ ಅಥವಾ ಐಸಿಐಸಿಐ ಬ್ಯಾಂಕ್, ಈ ಆರು ಬ್ಯಾಂಕ್‌ಗಳಲ್ಲಿ ಯಾವುದಾದರೊಂದು ಬ್ಯಾಂಕಿನಲ್ಲಿ ರೀಟೇಲರ್ ತೆರೆಯಬಹುದು. ಒಂದು ವೇಳೆ ಈಗಾಗಲೇ ಈ ಯಾವುದಾದರೊಂದು ಬ್ಯಾಂಕ್‌ನಲ್ಲಿ ಕರೆಂಟ್ ಅಕೌಂಟ್ ಹೊಂದಿದ್ದರೆ, ಆ ಕರೆಂಟ್ ಅಕೌಂಟ್‌ಗೆ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ ಸೌಲಭ್ಯವನ್ನು 25.11.2007ರ ಒಳಗಾಗಿ ಪಡೆಯತಕ್ಕದ್ದು.

ಡಿಪೋ ವ್ಯವಸ್ಥಾಪಕರುಗಳು ಮೇಲೆ ಹೇಳಿದಂತೆ, ತಮ್ಮ ತಮ್ಮ ಡಿಪೋ ಅಡಿಯಲ್ಲಿ ಬರುವ ಪ್ರತಿಯೊಬ್ಬ ರೀಟೇಲರ್, ಇ–ಟ್ರಾನ್ಸ್‌ಫರ್ ಸೌಲಭ್ಯ ಹೊಂದಿರುವ ಅಕೌಂಟನ್ನು 25.11.2007 ರ ಒಳಗೆ ಹೊಂದಿರುವಂತೆ ಕ್ರಮ ತೆಗೆದುಕೊಳ್ಳುವಂತೆ ಈ ಮೂಲಕ ತಿಳಿಸಲಾಗಿದೆ. ಈ ಬಗ್ಗೆ ಸಾಧಿಸಿದ ಪ್ರಗತಿಯನ್ನು ಪ್ರತಿ ಶುಕ್ರವಾರ ಈ ಕೆಳಗಿನ ನಮೂನೆಯಲ್ಲಿ ಈ–ಮೇಲ್ ಮೂಲಕ ಕಳುಹಿಸತಕ್ಕದ್ದು.

| **ಡಿಪೋ ಹೆಸರು :** | | | | | **ದಿನಾಂಕ :** | | |
|---|---|---|---|---|---|---|---|
| ಡಿಪೋನ ಒಟ್ಟು ರೀಟೇಲರ್‌ಗಳ ಸಂಖ್ಯೆ: | ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ ಸೌಲಭ್ಯವಿರುವ ಬ್ಯಾಂಕ್ ಅಕೌಂಟ್ ಹೊಂದಿರುವ ರೀಟೇಲರ್‌ಗಳ ಸಂಖ್ಯೆ : | | | | | | |
| | ಎಸ್.ಬಿ.ಐ | ಎಸ್.ಬಿ.ಎಂ | ಸಿಂಡಿಕೇಟ್ | ಐಎನ್‌ಜಿ ವೈಶ್ಯ | ಆ್ಯಕ್ಸಿಸ್ | ಐಸಿಐಸಿಐ | **ಒಟ್ಟು** |
| | | | | | | | |

ಸಹಿ.
ಕಂಪನಿ ಕಾರ್ಯದರ್ಶಿ

ಗೆ : ಎಲ್ಲ ಮದ್ಯಮಳಿಗೆ ವ್ಯವಸ್ಥಾಪಕರುಗಳಿಗೆ

ಪ್ರತಿ :
1. ವ್ಯವಸ್ಥಾಪಕ ನಿರ್ದೇಶಕರು
2. ವಿಶೇಷ ಕರ್ತವ್ಯಾಧಿಕಾರಿ (ಹಣಕಾಸು)
3. ಕಾರ್ಯನಿರ್ವಾಹಕ ನಿರ್ದೇಶಕರು ( ಸಿಪಿ) / ಕಾರ್ಯನಿರ್ವಾಹಕ ನಿರ್ದೇಶಕರು (ಕಾರ್ಯಾಚರಣೆ)
4. ಪ್ರಧಾನ ವ್ಯವಸ್ಥಾಪಕರು (ಕಾರ್ಯಾಚರಣೆ)
5. ಉಪಪ್ರಧಾನ ವ್ಯವಸ್ಥಾಪಕರುಗಳು / ಎಲ್ಲ ವ್ಯವಸ್ಥಾಪಕರುಗಳು / ಲೆಕ್ಕಪರಿಶೋಧಕರು / ಲೈಬ್ರರಿ